**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು. ದಿಃ 14.02.2023.**

**<u>ಮುಂದುವರೆದ ಪಾಟೀಸವಾಲುಃ 1, 2 ಮತ್ತು 4 ನೇ ಪ್ರತಿವಾದಿಗಳ ಪರ ಶ್ರೀ ಎನ್ ಕೆ ವಕೀಲರಿಂದಃ</u>**

7. ನನ್ನ ತಮ್ಮ ಮಹಾಲಿಂಗಪ್ಪ ರವರು ಮೃತಪಟ್ಟಿರುತ್ತಾರೆ ಎಂದರೆ ನಿಜ. ಅವರ ಹೆಂಡತಿ ಶೋಭಾ ಮತ್ತು ಮಗ ಕೊಟ್ರೇಶ್ ಜೀವಂತ ಇರುತ್ತಾರೆ ಎಂದರೆ ನಿಜ. ನನ್ನ ಅತ್ತೆ ವೀರಬಸಮ್ಮ ಮತ್ತು ಅವರ ಮಗಳು ರತ್ನಮ್ಮ ಜೀವಂತ ಇರುತ್ತಾರೆ ಎಂದರೆ ನಿಜ. ಸದರಿ ಶೋಭಾ, ಕೊಟ್ರೇಶ್, ವೀರಬಸಮ್ಮ ಮತ್ತು ರತ್ನಮ್ಮ ರವರು ಈ ವ್ಯಾಜ್ಯ ಸಲ್ಲಿಸಲು ಅಧಿಕಾರ ಪತ್ರ ಕೊಟ್ಟಿರುತ್ತಾರೆ. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಿರಾ ಎಂದರೆ ಸದರಿಯವರು ನನ್ನನ್ನು ಮ್ಯಾನೇಜರ್ ಮಾಡಿದ ಕಾರಣ ಅದನ್ನು ಹಾಜರುಪಡಿಸಿರುವುದಿಲ್ಲ.

8. ಗುರುಸಿದ್ದಪ್ಪ ಹಾಗೂ ಚೆನ್ನಬಸಪ್ಪ ರವರ ನಡುವೆ ಯಾವಾಗ ಪಾಲು ಅಗಿದೆ ಎಂದು ನನಗೆ ದಿನಾಂಕ ಗೊತ್ತಿಲ್ಲ. ದಾವಾ ಐಟಂ ನಂ.1 ಸ್ವತ್ತನ್ನು ನನ್ನ ತಂದೆಯವರ ಹಿಸ್ಸೆಗೆ ಕೊಟ್ಟಿರುತ್ತಾರೆ ಎಂದರೆ ಹಿಸ್ಸೆಯಾಗಿರುವುದಿಲ್ಲ ಅದರೇ ಹೊಂದಾಣಿಕೆಯಿಂದ ಅವರವರ ಭಾಗವನ್ನು ಮಾಡಿಕೊಂಡು ಬರುತ್ತಿದ್ದಾರೆ. ದಾವಾ ಐ ಟಂ ನಂ.2 ರ ಪೈಕಿ 1 ಎಕರೆ 22 ಗುಂಟೆ ಜಮೀನನ್ನು ಪ್ರತಿವಾದಿ 1 ಮತ್ತು 2 ರವರು ಸಾಗುವಳಿ ಮಾಡುತ್ತಿದ್ದಾರೆ ಎಂದರೆ ನಿಜ. ದಾವಾ ಐಟಂ ನಂ.1 ಸ್ವತ್ತನ್ನು ಚೆನ್ನಬಸಪ್ಪ ರವರ ವಾರಸುದಾರರಾದ ನಾವು ಸಾಗುವಳಿ ಮಾಡುತ್ತಿದ್ದೇವೆ ಎಂದರೆ ನಿಜ. ದಾವಾ ಐಟಂ ನಂ.3 ರ ಪೈಕಿ ಖಾನೇಶುಮಾರಿ ನಂ.9 ಪಿ1 ರಲ್ಲಿ ಪ್ರತಿವಾದಿ 1 ಮತ್ತು 2 ರವರು ವಾಸಮಾಡಿಕೊಂಡು ಬರುತ್ತಿದ್ದಾರೆ ಎಂದರೆ ನಿಜ. ಖಾನೇಶುಮಾರಿ ನಂ.9 ಪಿ 2 ರಲ್ಲಿ ನಾವು ವಾಸಮಾಡಿಕೊಂಡು ಬರುತ್ತಿದ್ದೇವೆ ಎಂದರೆ ಸದರಿ ಖಾನೇಶುಮಾರಿ ನಂಬರ್ ಇತ್ತೀಚೆಗೆ ಆಗಿದ್ದು ಅದರಲ್ಲಿ ನಾವು ವಾಸಮಾಡಿಕೊಂಡು ಬರುತ್ತಿದ್ದೇವೆ. ದಾವಾ ಐಟಂ ನಂ.3 ರ ಸ್ವತ್ತಿನಲ್ಲಿ ನನ್ನ ದೊಡ್ಡಪ್ಪ ಗುರುಸಿದ್ದಪ್ಪ ರವರಿಗೂ ನನ್ನ ತಂದೆಯವರಿಗೆ ಇದ್ದಷ್ಟೆ ಹಕ್ಕು ಇರುತ್ತದೆ ಎಂದರೆ ನಿಜ. ನನ್ನ ತಂದೆ ಹಾಗೂ ನನ್ನ ದೊಡ್ಡಪ್ಪ ಗುರುಸಿದ್ದಪ್ಪ ರವರು ಕೌಟುಂಬಿಕ ವ್ಯವಸ್ಥೆ ಯನ್ನು ಸುಮಾರು 45 ವರ್ಷಗಳಿಂದ ಮಾಡಿಕೊಂಡಿದ್ದು ಅದರಂತೆ ಅನುಭವಿಸಿಕೊಂಡು ಬರುತ್ತಿದ್ದಾರೆ ಎಂದರೆ ನಿಜ. ಆ ರೀತಿ ಅನುಭವಿಸಿಕೊಂಡು ಬರುತ್ತಿದ್ದ ಸ್ವತ್ತುಗಳ ಕಂದಾಯವನ್ನು ನಮ್ಮ ಪಾಲಿನ ಸ್ವತ್ತಿಗೆ ನಾವು ಹಾಗೂ ಪ್ರತಿವಾದಿಗಳ ಪಾಲಿನ ಸ್ವತ್ತಿಗೆ ಪ್ರತಿವಾದಿಗಳು ಕಟ್ಟಿಕೊಂಡು ಬರುತ್ತಿದ್ದಾರೆ ಎಂದರೆ ಪ್ರತಿವಾದಿಗಳೆ ಕಟ್ಟಿಕೊಂಡು ಬರುತ್ತಿದ್ದಾರೆ.

9. ನನಗೆ ಎರಡು ಭಾವಚಿತ್ರಗಳನ್ನು ತೋರಿಸಲಾಯಿತು. ಸದರಿ ಭಾವಚಿತ್ರಗಳಲ್ಲಿ ಕಾಣುವ ಮನೆ ಖಾನೇಶುಮಾರಿ ನಂ.9 ರಲ್ಲಿ ಇರುವ ಮನೆಗಳು ಎಂದರೆ ನಿಜ. ಸದರಿ ಭಾವಚಿತ್ರಗಳನ್ನು **ನಿಡಿ 2 ಮತ್ತು 3** ಎಂದು ಗುರುತಿಸಲಾಯಿತು. ದಾವಾ ಐಟಂ ನಂ.3 ರ ಆಸ್ತಿಯಲ್ಲಿ ಹಳೆಯ ಮನೆ ಇದ್ದು ಅದರಲ್ಲಿ ನನ್ನ ತಂದೆ ಹಾಗೂ ನನ್ನ ದೊಡ್ಡಪ್ಪ ಗುರುಸಿದ್ದಪ್ಪ ರವರು ಅವರವರ ಹಿಸ್ಸೆಯಲ್ಲಿ ವಾಸವಾಗಿದ್ದರು ಎಂದರೆ ನಿಜ. ಸದರಿ ಹಳೆ ಮನೆ ವಾಸಕ್ಕೆ ಯೋಗ್ಯವಾಗಿ ಇರದ ಕಾರಣ ನನ್ನ ಸಹೋದರ ಪ್ರತಿವಾದಿ 3 ರವರು

ಹೊಸ ಮನೆಯನ್ನು ನಿರ್ಮಾಣ ಮಾಡುತ್ತಿದ್ದಾರೆ ಎಂದರೆ ಇರಬಹುದು. 1 ಮತ್ತು 2 ನೇ ಪ್ರತಿವಾದಿಗಳು ಸಹ ಅವರ ಹಿಸ್ಸೆಯ ದಾವಾ ಐಟಂ ನಂ.3 ರ ಸ್ವತ್ತಿನಲ್ಲಿ ಹಳೆ ಮನೆಯನ್ನು ತೆರವುಗೊಳಿಸಿ ಹೊಸ ಮನೆ ನಿರ್ ಮಾಣ ಮಾಡುತ್ತಿದ್ದಾರೆ ಎಂದರೆ 1 ಮತ್ತು 2 ನೇ ಪ್ರತಿವಾದಿಗಳಿಂದ ಖರೀದಿ ಮಾಡಿದ ಖರೀದಿ ದಾರರು ಮನೆ ಕಟ್ಟುತ್ತಿದ್ದಾರೆ. 1 ಮತ್ತು 2 ನೇ ಪ್ರತಿವಾದಿಗಳು ಸದರಿಯವರಿಗೆ ಅರ್ಥಿಕ ತೊಂದರೆಯಾದ ಕಾರಣ ಸದರಿ ದಾವಾ ಐಟಂ ನಂ.3 ಸ್ವತ್ತಿನಲ್ಲಿ ಮನೆಯನ್ನು ನಿರ್ಮಾಣ ಮಾಡಿರುವುದಿಲ್ಲ ಎಂದರೆ ಸದರಿಯವರು ಮದುವೆ ಮಾಡಿ ಅವರ ಗಂಡಂದಿರೊಂದಿಗೆ ಇದ್ದು ಅವರಿಗೆ ಮನೆ ಮಾಡುವ ಅವಶ್ಯಕತೆ ಇರುವುದಿಲ್ಲ. 1 ಮತ್ತು 2 ನೇ ಪ್ರತಿವಾದಿಗಳು ಸದರಿಯವರಿಗೆ ಮನೆ ನಿರ್ಮಾಣ ಮಾಡಲು ಅರ್ಥಿಕ ಸಮಸ್ಯೆ ಇದ್ದ ಕಾರಣ ದಾವಾ ಐಟಂ ನಂ.3 ರಲ್ಲಿ ತಮ್ಮ ಹಿಸ್ಸೆಯ ಆಸ್ತಿಯನ್ನು 4 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ 1 ಮತ್ತು 2 ನೇ ಪ್ರತಿವಾದಿಗಳು ಸದರಿ ಆಸ್ತಿಯನ್ನು ಮೊದಲು 3 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದರೂ ನಂತರ ನನಗೂ ಹಾಗೂ 3 ನೇ ಪ್ರತಿವಾದಿಗೆ ಮೋಸ ಮಾಡಿ 4 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ. ನಾನು ಹಾಗೂ 3 ನೇ ಪ್ರತಿವಾದಿ ಸದರಿ ಆಸ್ತಿಗೆ ಅತ್ಯಂತ ಕಡಿಮೆ ಬೆಲೆಗೆ ಕೇಳಿದ ಕಾರಣ 1 ಮತ್ತು 2 ನೇ ಪ್ರತಿವಾದಿಗಳು ಸದರಿ ಸ್ವತ್ತನ್ನು ನಮಗೆ ಮಾರಾಟ ಮಾಡಿರುವುದಿಲ್ಲ ಎಂದರೆ ಸುಳ್ಳು. ಆ ಕಾರಣ 1 ಮತ್ತು 2 ನೇ ಪ್ರತಿವಾದಿ 4 ನೇ ಪ್ರತಿವಾದಿಗೆ ರೂ.3,35,000/- ಕ್ಕೆ ಸದರಿ ಸ್ವತ್ತನ್ನು ಮಾರಾಟ ಮಾಡಿರುತ್ತಾರೆ ಎಂದರೆ ನಾವು ಸದರಿ ಸ್ವತ್ತನ್ನು ಅದೇ ಬೆಲೆಗೆ ಕೊಡಿ ಎಂದು ಕೇಳಿದರೂ ನಮಗೆ ಮೋಸ ಮಾಡಿ 4 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ. ಸದರಿ ಕ್ರಯ ಪತ್ರದ ಆಧಾರದ ಮೇಲೆ 4 ನೇ ಪ್ರತಿವಾದಿ ಪಂಚಾಯ್ತಿ ಮುಖಾಂತರ ಸದರಿ ಸ್ವತ್ತಿಗೆ ಖಾತೆ ಮಾಡಿರುತ್ತಾರೆ ಎಂದರೆ ನಾವು ತಕರಾರು ನಿಡಿದ್ದರೂ ಜನ ಬಲ ಹಾಗೂ ಹಣ ಬಲದಿಂದ ಖಾತೆಯನ್ನು ಮಾಡಿಸಿರುತ್ತಾರೆ.

10. 4 ನೇ ಪ್ರತಿವಾದಿ ಮೇಲೆ ಹೇಳಿದ ಜಮೀನಿನಲ್ಲಿ ಮನೆ ಕಟ್ಟಿದ ನಂತರ ನಾವು ಈ ವ್ಯಾಜ್ಯ ಸಲ್ಲಿಸಿರುತ್ತೇವೆ ಎಂದರೆ ನಾವು ವ್ಯಾಜ್ಯ ಸಲ್ಲಿಸಿದ ನಂತರ 4 ನೇ ಪ್ರತಿವಾದಿ ಮನೆಯನ್ನು ಕಟ್ಟಿರುತ್ತಾರೆ. ನನಗೆ 1 ಭಾವಚಿತ್ರವನ್ನು ತೋರಿಸಲಾಯಿತು. ಸದರಿ ಭಾವಚಿತ್ರದಲ್ಲಿ ಕಾಣುವ ಮನೆ 4 ನೇ ಪ್ರತಿವಾದಿ ಸದರಿ ಸ್ವತ್ತಿನಲ್ಲಿ ನಿರ್ಮಿಸಿದ

ಮನೆಯಾಗಿರುತ್ತದೆ ಎಂದರೆ ಇರಬಹುದು. ಸದರಿ ಭಾವಚಿತ್ರವನ್ನು **ನಿಡಿ 4** ಎಂದು ಗುರುತಿಸಲಾಯಿತು.

11. 3 ನೇ ಪ್ರತಿವಾದಿಯನ್ನು ನನ್ನ ತಂದೆ ದತ್ತಕ ಪಡೆದಿರುತ್ತಾರೆ ಎಂದು ತೋರಿಸಲು ದತ್ತಕ ಪತ್ರ ಇರುತ್ತದೆಯಾ ಎಂದರೆ ನಮ್ಮ ಮನೆಯಲ್ಲಿ 3 ನೇ ಪ್ರತಿವಾದಿಯ ದತ್ತಕದ ಬಗ್ಗೆ ಚರ್ಚೆಯಾದಾಗ ಸದರಿ ದತ್ತಕ ಪತ್ರವನ್ನು 1 ಮತ್ತು 2 ನೇ ಪ್ರತಿವಾದಿಯವರು ಸುಟ್ಟು ಹಾಕಿರುತ್ತಾರೆ. 3 ನೇ ಪ್ರತಿವಾದಿ ದಾವಾ ಐಟಂ ನಂ.3 ರ ನಮಗೆ ಸಂಬಂಧಿಸಿದ ಸ್ವತ್ತಿನಲ್ಲಿ ಮನೆ ನಿರ್ಮಾಣ ಮಾಡುತ್ತಿದ್ದರೆ ಎಂದರೆ ನನ್ನ ಅನುಮತಿ ಮೇರೆಗೆ ಮನೆಯನ್ನು ನಿರ್ಮಾಣ ಮಾಡುತ್ತಿದ್ದಾರೆ. ನಾನು ಹಾಗೂ 3 ನೇ ಪ್ರತಿವಾದಿ ಯವರು ಅಸಲು ದಾವಾ ನಂ.174/2018 ರಂತೆ ಪ್ರತಿವಾದಿ 1 ಮತ್ತು 2 ರವರ ತಂದೆಯವರು ದಾವಾ ಐಟಂ ನಂ.3 ರ ಸ್ವತ್ತಿಗೆ ಸಂಬಂಧಪಿಟ್ಟಂತೆ ವಿಲ್ ನಾಮೆ ಬರೆದಿರುತ್ತಾರೆ ಎಂದು ವ್ಯಾಜ್ಯ ಸಲ್ಲಿಸಿರುತ್ತೇವೆ ಎಂದರೆ ವ್ಯಾಜ್ಯ ಸಲ್ಲಿಸಿರುವುದು ನಿಜ ಇರುತ್ತದೆ ಆದರೆ ವಿಲ್ ನಾಮೆಯ ಬಗ್ಗೆ ವ್ಯಾಜ್ಯ ಸಲ್ಲಿಸಿರುತ್ತೇವಾ ಎಂದು ನನಗೆ ಗೊತ್ತಾಗುವುದಿಲ್ಲ. ಸದರಿ ವ್ಯಾಜ್ಯದಲ್ಲಿ ಫೋರ್ಜರಿ ವಿಲ್ ಅನ್ನು ನಾವು ಮಾಡಿರುತ್ತೇವೆ ಎಂದು 1 ಮತ್ತು 2 ನೇ ಪ್ರತಿವಾದಿಗಳು ಮೌಖಿಕವಾಗಿ ಹೇಳಿಕೆ ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆ ಕಾರಣ ನಾವು ಸದರಿ ದಾವೆಯನ್ನು ವಾಪಾಸ್ ಪಡೆದುಕೊಂಡಿರುತ್ತೇವೆ ಎಂದರೆ ಆ ಬಗ್ಗೆ ನಮ್ಮ ವಕೀಲರಿಗೆ ಗೊತ್ತು ನನಗೆ ಗೊತ್ತಿಲ್ಲ.

12. ನನಗೆ ಗುರುಸಿದ್ದಪ್ಪ ರವರ ಹೆಂಡತಿ ಬಸವಣ್ಯಮ್ಮ ರವರು ವಿಲ್ ಬರೆದ ವಿಚಾರ ಅಥವಾ ಸದರಿ ವಿಲ್ ನಾಮೆಯ ಸಂಬಂಧ ನಾನು ಮತ್ತು 3 ನೇ ಪ್ರತಿವಾದಿ ಲ್ಲಿಸಿದ ವ್ಯಾಜ್ಯದ ಬಗ್ಗೆ ನನಗೆ ಗೊತ್ತಿರುವುದಿಲ್ಲ ಎಂದರೆ ನಿಜ. ಸದರಿ ಗುರುಸಿದ್ದಪ್ಪ ರವರಿಗೆ ಪ್ರತಿವಾದಿ 1 ಮತ್ತು 2 ರವರು ಮಾತ್ರ ವರಸುದಾರರು ಎಂದರೆ ನಿಜ. 1 ಮತ್ತು 2 ನೇ ಪ್ರತಿವಾದಿಗಳು ಓದು ಬರಹ ಬಲ್ಲವರಾಗಿರುವುದಿಲ್ಲ ಎಂದರೆ ಸುಳ್ಳು. ಸದರಿ ಗುರುಸಿದ್ದಪ್ಪ ರವರ ಭಾಗಕ್ಕೆ ಬಂದು ಜಮೀನು ಮತ್ತು ಮನೆದಳ ದಲ್ಲಿ ನನ್ನಗಾಗಲೀ ನನ್ನ ತಂದೆಯವರಿಗಾಗಲೀ ಹಕ್ಕು ಇರುವುದಿಲ್ಲ ಎಂದರೆ ಸುಳ್ಳು. ನಾನು ಮುಂದುವರೆದು ಹೇಳುವುದೇನೆಂದರೆ ಸದರಿ ಗುರುಸಿದ್ದಪ್ಪ ರವರ ದತ್ತಕ ಮಗನಾದ 3 ನೇ ಪ್ರತಿವಾದಿಗೆ

ಹಕ್ಕು ಇರುತ್ತದೆ. 1 ಮತ್ತು 2 ನೇ ಪ್ರತಿವಾದಿಗಳಿಗೆ ದಾವಾ ಸ್ವತ್ತಿನಲ್ಲಿ ಇರುವ ಆಸ್ತಿಗಳನ್ನು ಕಬಳಿಸಬೇಕು ಎಂಬ ಉದ್ದೇಶದಿಂದ ನಾನು 3 ನೇ ಪ್ರತಿವಾದಿಗೆ ಷರಿಕ್ ಆಗಿ 3 ನೇ ಪ್ರತಿವಾದಿ ಸದರಿ ಗುರುಸಿದ್ದಪ್ಪ ರವರ ದತ್ತು ಮಗ ಎಂದು ಸುಳ್ಳು ಸಾಧನೆ ಮಾಡುತ್ತಿದ್ದೇನೆ ಎಂದರೆ ಸುಳ್ಳು.

13. ದಾವಾ ಐಟಂ ನಂ.3 ರ ಪೈಕಿ 9 ಪಿ1 ರ ಸ್ವತ್ತನ್ನು 4 ನೇ ಪ್ರತಿವಾದಿ 1 ಮತ್ತು 2 ನೇ ಪ್ರತಿವಾದಿಯಿಂದ ಖರೀದಿ ಮಾಡಿರುವ ಕಾರಣ ನನಗೆ ಅದರಲ್ಲಿ ಯಾವುದೇ ಹಕ್ಕುಗಳು ಇರುವುದಿಲ್ಲ ಎಂದರೆ ನಿಜ. ನಾನು ಮುಂದುವರೆದು ಹೇಳುವುದೇನೆಂದರೆ 3 ನೇ ಪ್ರತಿವಾದಿಗೆ ಸದರಿ ಸ್ವತ್ತಿನಲ್ಲಿ ಹಕ್ಕು ಇರುತ್ತದೆ. ದಾವಾ ಐಟಂ ನಂ.1 ಮತ್ತು 2 ನೇ ಸ್ವತ್ತಿನಲ್ಲಿ ಗುರುಸಿದ್ದಪ್ಪ ರವರ ಹಿಸ್ಸೆ ಸ್ವತ್ತಿನಲ್ಲಿ ನನಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ನಿಜ. ನಾನು ಮುಂದುವರೆದು ಹೇಳುವುದೇನೆಂದರೆ ದತ್ತಕ ಮಗನಾದ 3 ನೇ ಪ್ರತಿವಾದಿಗೆ ಹಕ್ಕು ಇರುತ್ತದೆ. ನಾನು ಹಾಗೂ 3 ನೇ ಪ್ರತಿವಾದಿ ಸಹೋದರರಾದ ಕಾರಣ ಷರೀಕ್ ಆಗಿ 1, 2 ಮತ್ತು 4 ನೇ ಪ್ರತಿವಾದಿಗಳ ಪರ ಸುಳ್ಳು ದಾವೆಯನ್ನು ಹೂಡಿರುತ್ತೇನೆ ಎಂದರೆ ಸುಳ್ಳು.

**ಮರುವಿಚಾರಣೆಃ ಇಲ್ಲ.**

**(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತ ಲೇಖನದ ರೀತ್ಯಾ ಕಂಪ್ಯೂಟರೀಕರಿ ಸಲಾಯ್ತು).**

**ಓದಿ, ಹೇಳಿ, ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ.**

**ಸಿವಿಲ್ ನ್ಯಾಂ ಮತ್ತು ಜೆ ಎಂ ಎಫ್ ಸಿಃ ಸೊರಬ**